# ಚಿತ್ರಗಳೂ ಬುದ್ಧಿಮತ್ತೆಯೂ

ತಮಿಳಿನಲ್ಲಿ ನಿರ್ದೇಶಕ ಶಂಕರ್ 'ರೋಬೊ' ಸಿನಿಮಾ ನಿರ್ದೇಶಿಸಿದಾಗ ಕೃತಕ ಬುದ್ಧಿವಂತಿಕೆ ಹಾಗೂ ಮಾನವ ಸಂಘರ್ಷಗಳ ಭಾವುಕ ಲೋಕವೊಂದು ರೂಪಕಾತ್ಮಕವಾಗಿ ಅನಾವರಣಗೊಂಡಿತು. ಹಾಗೆ ನೋಡಿದರೆ ಭಾರತೀಯ ಚಿತ್ರಗಳಲ್ಲಿ ಇಷ್ಟು ದೊಡ್ಡ ಬಜೆಟ್ ಹಾಕಿ, ರೋಬೊ ಚಿತ್ರಗಳನ್ನು ಅದುವರೆಗೆ ಯಾರೂ ಮಾಡಿರಲಿಲ್ಲ. ರಜನೀಕಾಂತ್ ಅವರಿಗಿದ್ದ ವಿಶಾಲ ಪ್ರೇಕ್ಷಕ ವಲಯ ಹಾಗೂ ಆಧುನಿಕ ಜನಪ್ರಿಯ ಶೈಲಿಯ ಚಿತ್ರಪಟ ಕೌಶಲ ಎರಡೂ ಮೇಳೈಸಿದ ಸಿನಿಮಾ 'ರೋಬೊ'. ನಟ ಶಾರುಖ್ ಖಾನ್ ತನ್ನ ಮಗನ ಒತ್ತಾಸೆಗೆ ಸ್ಪಂದಿಸಿ 'ರಾ.ಒನ್' ಹಿಂದಿ ಚಿತ್ರ ನಿರ್ಮಿಸಿದ್ದು. ಅವರಿಗೆ 'ರೋಬೊ' ತಮಿಳು ಸಿನಿಮಾ ಸ್ಫೂರ್ತಿಯಾಗಿತ್ತಾದರೂ ರಜನಿ ಅಭಿನಯದ ಚಿತ್ರ ಗಮನ ಸೆಳೆದಷ್ಟು ಜನಾಕರ್ಷಣೆ ಅವರ ಚಿತ್ರಕ್ಕೆ ಸಾಧ್ಯವಾಗಲಿಲ್ಲ. 'ಟಾರ್ಜನ್ ದಿ ವಂಡರ್ ಕಾರ್' ತರಹದ ಹಿಂದಿಯ ಮನರಂಜನಾತ್ಮಕ ಚಿತ್ರ ಮಕ್ಕಳನ್ನು ಹಿಡಿದು ಕೂರಿಸಿತ್ತು. ಹೀಗಿದ್ದೂ ದೊಡ್ಡ ಮೊತ್ತದ ಹಣ ಕೇಳುವ ಕಾರಣಕ್ಕೆ ಭಾರತದಲ್ಲಿ ಕೃತಕ ಬುದ್ಧಿಮತ್ತೆ ಆಧರಿಸಿದ ಸಿನಿಮಾಗಳು ಬಂದದ್ದು ವಿರಳ ಎನ್ನಬೇಕು.

ಇಂಗ್ಲಿಷ್ ಚಿತ್ರಗಳಲ್ಲಿ 'ರೋಬೊ' ಪ್ರೀತಿ 1927ರಿಂದಲೇ ಶುರುವಾಯಿತು. ಅದು ಬರಬರುತ್ತಾ ಬೇರೆ ಆಯಾಮಗಳನ್ನು, ಸಿನಿಮಾ ತಂತ್ರಜ್ಞಾನಗಳನ್ನು ಒಳಗೊಳ್ಳುತ್ತಾ ಹೋಯಿತು. ಅಲ್ಲಿಯೂ ಮನುಷ್ಯನ ಮನಸ್ಸು, ಯಂತ್ರದ ಚಾಕಚಕ್ಯತೆಯ ಸಂಘರ್ಷಗಳನ್ನೇ ಹೆಚ್ಚಾಗಿ ಕಾಣಬಹುದು.

2012ರಲ್ಲಿ ತೆರೆಕಂಡ 'ರೋಬೊ ಅಂಡ್ ಫ್ರಾಂಕ್' ಅನ್ನೇ ಉದಾಹರಣೆಯಾಗಿ ತೆಗೆದುಕೊಳ್ಳೋಣ. ವಂಚಕ ಫ್ರಾಂಕ್ ಜೈಲುವಾಸವನ್ನೂ ಅನುಭವಿಸಿದವನು. ಅವನಿಗೆ ವಯಸ್ಸಾಯಿತು ಎಂದು ನೋಡಿಕೊಳ್ಳಲು ರೋಬೊ ಒಂದನ್ನು ಮಗ ಮನೆಗೆ ತರುತ್ತಾನೆ. ಆ ರೋಬೊಗೆ ಫ್ರಾಂಕ್ ಬೀಗ ತೆಗೆಯುವ ದುರ್ವಿದ್ಯೆಯನ್ನು ಕಲಿಸುತ್ತಾನೆ. ದೊಡ್ಡ ಕಿರೀಟವೊಂದನ್ನು ಕದ್ದಮೇಲೆ ತನ್ನ ಹಳೆಯ ಚಾಳಿಯನ್ನು ಬಿಡುತ್ತಾನೆ. ಯಂತ್ರವನ್ನು ಮನುಷ್ಯ ತನ್ನ ದುಷ್ಕೃತ್ಯಕ್ಕೆ ಬಳಸಿಕೊಳ್ಳುವ ಪ್ರಮೇಯ ಎತ್ತುವ ಇಂಥ ಪ್ರಶ್ನೆಗಳು ಮುಖ್ಯವಾದವು. 1973ರಲ್ಲಿ ತೆರೆಕಂಡ 'ವೆಸ್ಟ್ ವರ್ಲ್ಡ್' ಕೂಡ ಯಂತ್ರ ಕ್ರೌರ್ಯ ಆಧರಿಸಿದ ಚಿತ್ರ.

ನಟ ರಾಬಿನ್ ವಿಲಿಯಮ್ಸ್ ರೋಬೊಟ್ಲರ್ ಪಾತ್ರದಲ್ಲಿ ಅಭಿನಯಿಸಿದ 'ಬೈಸೆಂಟೆನ್ನಿಯಲ್ ಮ್ಯಾನ್' (1999) ಹೆಚ್ಚು ಜನಮೆಚ್ಚುಗೆ ಗಳಿಸದ ಚಿತ್ರ. ಆದರೆ, ಮನುಕುಲಕ್ಕೆ ಒಳಿತನ್ನು ಮಾಡುವ ಯಂತ್ರದ ಉಮೇದನ್ನೇ ವಸ್ತುವಾಗಿಸಿಕೊಂಡ ಈ ಚಿತ್ರ ಅಭಿರುಚಿಯಿಂದಾಗಿ ಮೆಚ್ಚುಗೆಗೆ ಅರ್ಹ.

ಎರಡು ವರ್ಷಗಳ ಹಿಂದೆ ತೆರೆಕಂಡ 'ಟ್ರಾನ್ಸೆಂಡೆನ್ಸ್' ಯಂತ್ರಕ್ಕೆ ಸೇಡಿನ ಉದ್ದೇಶದಿಂದ ಕೃತಕ ಬುದ್ಧಿಮತ್ತೆ ಪೂರೈಸಿದ ಮೇಲೆ ಆಗುವ ಭಾವುಕ ಬದಲಾವಣೆಗಳಿಗೆ ಕನ್ನಡಿ ಹಿಡಿಯುತ್ತದೆ. 'ರೋಮಿಯೊ ಜೂಲಿಯಟ್'ನ ಯಂತ್ರೀಕೃತ ಆವೃತ್ತಿಯಂತೆ ಕಾಣುವ ಈ ಸಿನಿಮಾಗೆ ಉತ್ತಮ ವಿಮರ್ಶೆ ಸಿಕ್ಕಿತು.

ಯಂತ್ರದೊಳಗೆ ದೆವ್ವದಂತೆ ವ್ಯಕ್ತಿಯೊಬ್ಬ ತಂತ್ರಜ್ಞಾನದ ನೆರವಿನಿಂದ ಪ್ರವೇಶಿಸುವ ಕಥಾನಕ ಇರುವ 'ಟ್ರಾನ್' 1982ರಲ್ಲೇ ಜನರನ್ನು ಆಕರ್ಷಿಸಿತ್ತು. ಪೊಲೀಸ್ ವ್ಯವಸ್ಥೆಯ ಆದರ್ಶದ ಬಯಕೆಯ ಕವಲಿನಂತೆ ಗಮನ ಸೆಳೆದದ್ದು 1987ರ ಚಿತ್ರ 'ರೋಬೊಕಾಪ್'. ಸ್ಪೆಷಲ್ ಎಫೆಕ್ಟ್ ಮೂಲಕ ತಾಂತ್ರಿಕ ಕೌಶಲಗಳನ್ನು ಹದವಾಗಿ ಬಳಸಿದ ಚಿತ್ರವಾಗಿ ಹಾಲಿವುಡ್ 'ರೋಬೊ'ವನ್ನು (2004) ನೋಡಬೇಕು.

1927ರಲ್ಲಿ ತೆರೆಕಂಡಿದ್ದ 'ಮೆಟ್ರೊಪೊಲೀಸ್' ಫ್ರಿಟ್ಜ್ ಲ್ಯಾಂಗರ್ ನ ಮಹತ್ವಾಕಾಂಕ್ಷಿ ಮೂಕಚಿತ್ರ. ಇಡೀ ನಗರದ ಜನರನ್ನು ಕಾಡುವ ರೋಬೊ ಪಾತ್ರವೊಂದರ ಮೇಲೆ ಕೇಂದ್ರೀಕೃತವಾದ ಈ ಸಿನಿಮಾ ಕೂಡ ಕೃತಕ ಜ್ಞಾನದಾಹದ ಆತಂಕಗಳ ಮಂಥನ ನಡೆಸಿತ್ತು.



1970ರ 'ಕೊಲೊಸಸ್: ದಿ ಫಾರ್ಬಿನ್ ಪ್ರಾಜೆಕ್ಟ್' ಯುದ್ಧ, ತಂತ್ರಜ್ಞಾನ ಹಾಗೂ ಮಾನವ ಸಂಘರ್ಷಗಳ ಆಧುನಿಕ ರೂಪಕ ಎನ್ನಬಹುದಾದ ಚಿತ್ರ. 2005ರಲ್ಲಿ ತೆರೆಕಂಡ 'ಹಿಚಿಕರ್ಸ್ ಗೈಡ್ ಟು ದಿ ಗ್ಯಾಲಾಕ್ಸಿ' ಚಿತ್ರ ಯಂತ್ರಮಾನವನಿಗೆ ಹೆಚ್ಚು ಒತ್ತಡ ಹೇರಿದರೆ ಆಗಬಹುದಾದ ಭಾವ ಕಂಪನದ ತೀವ್ರತೆಯನ್ನೇ ಪ್ರಕಟಪಡಿಸಿತ್ತು.

ಸಿನಿಮಾ ಹಾಗೂ ಆಧುನಿಕ ಕೃತಕ ಬುದ್ಧಿವಂತರ ನಡುವಿನ ರೋಮಾಂಚಕ ಕಥನಗಳ ಕಾಲವಿದು. ಕಳೆದ ವರ್ಷ ತೆರೆಕಂಡ 'ಅವೆಂಜರ್ಸ್: ಏಜ್ ಆಫ್ ಅಲ್ಟ್ರಾನ್' ಚಿತ್ರವು ಮನುಷ್ಯನೇ ಭೂಮಿಗೆ ಕಂಟಕ ಎಂದು ನಿರ್ಧರಿಸುವ ಕೃತಕ ಬುದ್ಧಿವಂತನ ನಡೆಗಳನ್ನು ಒಳಗೊಂಡಿದೆ. ಪ್ರಕೃತಿ ವಿಕೋಪದ ಸಂದಿಗ್ಧಗಳನ್ನು ನಿಭಾಯಿಸುವ ಪರಿಗೆ ಉತ್ತರರೂಪದಲ್ಲಿ 2014ರಲ್ಲಿ ಬಿಡುಗಡೆಯಾದ 'ಇಂಟರ್ಸ್ಟೆಲ್ಲಾರ್' ಚಿತ್ರವನ್ನು ನೋಡಬಹುದು. ರೋಬೊ ಹಾಗೂ ಲಲನಾಪ್ರೀತಿಯ ಸಂಘರ್ಷಗಳನ್ನು ಒಳಗೊಂಡ ಚಿತ್ರಗಳೂ ಬಂದಿವೆ. ಕಳೆದ ವರ್ಷ ಬಿಡುಗಡೆಯಾದ 'ಎಕ್ಸ್ ಮಷಿನಾ' ಅದಕ್ಕೆ ಉತ್ತಮ ಉದಾಹರಣೆ. 'ಆರ್ಟಿಫಿಷಿಯಲ್ ಇಂಟಲಿಜೆನ್ಸ್' ಎಂಬ ಹೆಸರಿನದ್ದೇ ಚಿತ್ರ 2001ರಲ್ಲಿ ಬಿಡುಗಡೆಯಾಗಿತ್ತು. ಭವಿಷ್ಯದ ಜನಪದ ಕಥೆಯಾಗಿ ಇದನ್ನು ಹೆಣೆಯಲಾಗಿತ್ತು.

ಕನ್ನಡದಲ್ಲಿ ದಿನೇಶ್ ಬಾಬು ನಿರ್ದೇಶಿಸಿದ 'ಹಾಲಿವುಡ್' ಚಿತ್ರದಲ್ಲಿ ರೋಬೊ ಇತ್ತಾದರೂ ಅದು ದುರ್ಬಲ ಹೆಣಿಗೆಯ ಗಮನ ಸೆಳೆಯುವ ಕ್ಷುಲ್ಲಕ ತಂತ್ರವಾಗಿ ಅಷ್ಟೇ ಉಳಿಯಿತು.

ಕೃತಕ ಬುದ್ಧಿವಂತೆಯನ್ನು ಜಾಗತಿಕ ಚಿತ್ರರಂಗ ಪ್ರಶ್ನಿಸುತ್ತಾ, ನಿಕಷಕ್ಕೆ ಒಡ್ಡುತ್ತಾ, ಮನರಂಜನೆಯ ಪರಿಕರವನ್ನೂ ಆಗಿಸಿಕೊಳ್ಳುತ್ತಾ ಬಂದಿದೆ. ಅದು ಮನುಷ್ಯನ ಆಧುನಿಕ ಚಿಂತನೆ ಹಾಗೂ ಅನ್ವೇಷಣೆಗಳ ಮಂಥನವೂ ಹೌದು.